ಕವಿತೆ




ಕೃಷ್ಣ ದೇವಾಂಗಮಠ

ಕಲೆ: ಎಸ್‌. ವಿ. ಹೂಗಾರ್


# ಇನ್ನು ಇರುವಷ್ಟು ದಿನ



ಯಾರ ಪಾಲಿನ ಮಿಂಚೊ
ನನ್ನ ಕಣ್ಣಲಿ ಮಿನುಗಿ
ಹೊಳೆವ ನಕ್ಷತ್ರವಾಗಿಸಿತು ನನ್ನ
ನಕ್ಷತ್ರ ರಾಶಿಗಳೇ
ತುಂಬಿಕೊಂಡವು ಮಿಂಚ
ಅವರ ಪಾಲಿನ ಮೋಹ ಕಸಿದುಕೊಂಡು

ಯಾವ ಮೂಕನ ಹೃದಯ
ಹಾಡಿತೀ ಕೊರಳಲ್ಲಿ
ಮಧುರತೆಯ ಜಗಕಡರಿಸಲು ನನ್ನಿಂದ
ಕಣ್ಣಿನೆಲ್ಲರ ಭಾಷೆ
ತುಂಬಿ ತುಳುಕಿಸಿತು ಮನವ
ತಮ್ಮ ನೋವನು ಇರಿಸಿ ಕಂಠದಲ್ಲೇ

ಒಂದು ಮತ್ತೊಂದೆಂದು
ಹಿಂದೆ ಹೋದರೆ ಬಂತೆ ಇರದ ಭಾಗ್ಯ
ಮೂರು ಮತ್ತೊಂದು ಸೇರಿ
ಮೇಳೈಸುವವು ತಾವಾಗೇ ಅಂತರಂಗ

ನಿಮ್ಮ ಹಾಡನು ಹಾಡಿ
ನುಡಿದ ಕೊರಳಿದು ಧನ್ಯ
ಉಲಿದ ಕೊಳಲಿದು ಧನ್ಯ

ನಿಮ್ಮ ಪಾಲಿನ ಮಿಂಚ ಪಡೆದು
ಹೊಳೆದ ನಕ್ಷತ್ರ ಮಾತ್ರ ನಾನು
ತುಂಬಿದಿರಿ ನೀವು ಮುಕ್ತ ಆಗಸವನೇ
ಕೊಟ್ಟು ನನಗಷ್ಟು ನಿಮ್ಮ ಭಾಗ
ಸಾಕು ಇಷ್ಟೇ ಎನಗೆ ಇಂಥ ಯೋಗ
ಮಿಂಚುವೆನು ಇನ್ನು ಇರುವಷ್ಟೂ ದಿನ
ನಾನು
ನಿಮ್ಮ ಕಣ್ಣಿನ ಹೊಳಪು ಆರದಂತೆ
ನನ್ನ ಕಣ್ಣಿನ ಬೆಳಕು ನೀವಿರುವಷ್ಟು ದಿನ
ತೀರದಂತೆ